**ಆರ್ ಬಿ ಐ / 2004-05 / 347**
ನಂ ಸಿಒ ಡಿಟಿ 13.01.299 / ಹೆಚ್ . 6284-6313 / 2004-05

**ಜನವರಿ, 15,2005**

**ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು**
ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕುಗಳು
ಹಾಗೂ 17 ರಾಷ್ಟ್ರೀಕೃತ ಬ್ಯಾಂಕುಗಳು
ವ್ಯವಸ್ಥಾಪಕ ನಿರ್ದೇಶಕರು
ಐಸಿಐಸಿಐ / ಐಡಿಬಿಐ / ಹೆಚ್ ಡಿ ಎಫ್ ಸಿ / ಯುಟಿಐ ಬ್ಯಾಂಕ್ ಲಿಮಿಟೆಡ್
ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ.

ಮಾನ್ಯರೇ,

**ಪರಿಹಾರ / ಉಳಿತಾಯ ಬಾಂಡುಗಳಯೋಜನೆ- ಅವಧಿ ತುಂಬಿದ ಬಾಂಡುಗಳಿಗೆ ಸಂದಾಯ ಆದೇಶಗಳ / ಡ್ರಾಫ್ಟ್‌ಗಳ ನೀಡಿಕೆ.**

ಪರಿಹಾರ / ಉಳಿತಾಯ ಬಾಂಡುಗಳ ಸಂಬಂಧದಲ್ಲಿ ಅವಧಿ ತುಂಬಿದ ಹುಟ್ಟುವಳಿಯನ್ನು (ಆದಾಯವನ್ನು) ಪ್ರತಿನಿಧಿಸುವ ಸಂದಾಯ ಆದೇಶಗಳನ್ನು ಪ್ರಸ್ತುತ ಎಲ್ಲ ಧಾರಕರ ಹೆಸರಿಗೆ ನೀಡುತ್ತಿರುವುದಕ್ಕೆ ಬದಲಾಗಿ ಹೂಡಿಕೆದಾರರಲ್ಲಿ ಯಾರಾದರೂ ಒಬ್ಬರ ಹೆಸರಿಗೆ ನೀಡಬೇಕೆಂದು ಶೀರೋನಾಮೆಯ ಬಾಂಡುಗಳ ಜಂಟಿಧಾರಕರಿಂದ ಸಲಹೆಗಳು ನಮಗೆ ಬರುತ್ತಿವೆ. ಈ ವಿಷಯವನ್ನು ನಾವು ಪರಿಶೀಲಿಸಿದ್ದು, " ಭಾರತೀಯ ಕರಾರು ಅಧಿನಿಯಮ, 1872 ರ 45 ನೇ ಪ್ರಕರಣವು ಜಂಟಿ ಹಕ್ಕುಗಳ ವರ್ಗಾವಣೆ ಬಗ್ಗೆ ವ್ಯವಹರಿಸುತ್ತದೆ. ಇದು ವಿರುದ್ಧವಾದ ಉದ್ದೇಶವನ್ನು ಘೋಷಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಜಂಟಿ ಧಾರಕರ ಅಧಿಕಾರ ಪತ್ರವು ಅದಕ್ಕೆ ಸಹಿ ಮಾಡುವ ಜಂಟಿ ಧಾರಕರ ಉದ್ದೇಶವನ್ನು ಘೋಷಿಸುತ್ತದೆ. ಹಾಗಾಗಿ, ಜಂಟಿಧಾರಕರ ಅಧಿಕಾರ ಪತ್ರದ ನಿಗದಿತ ನಮೂನೆಯ ಪ್ರಕಾರ ಇತರ ಎಲ್ಲ ಉಳಿದ ಧಾರಕರು ಯಾವ ಜಂಟಿ ಧಾರಕರ ಹೆಸರಿನಲ್ಲಿ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾರೋ ಆ ಜಂಟಿ ಧಾರಕರ ಹೆಸರಿಗೆ ಅವಧಿ ತುಂಬಿದ ಹುಟ್ಟುವಳಿಯ ಸಂದಾಯವನ್ನು ಬಿಡುಗಡೆ ಮಾಡುವುದಕ್ಕೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಸದರಿ ಅಧಿಕಾರ ಪತ್ರವನ್ನು ಯಾವ ಜಂಟಿ ಧಾರಕನ ಹೆಸರಿಗೆ ಬರೆದುಕೊಡಲಾಗಿದೆಯೋ ಆ ಜಂಟಿ ಧಾರಕನ ಹೆಸರಿನಲ್ಲಿ ಸಂದಾಯ ಆದೇಶವನ್ನು ನೀಡುವುದು ಕ್ರಮಬದ್ಧವಾಗಿದೆ ಎಂದು ನಾವು ಸಲಹೆ ಮಾಡುತ್ತೇವೆ".

2. ಮೇಲಿನ ಅಂಶದ ಹಿನ್ನೆಲೆಯಲ್ಲಿ ಮತ್ತು ಉತ್ತಮ ಗ್ರಾಹಕ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಜಂಟಿಧಾರಕರ ಅಧಿಕಾರ ಪತ್ರದ ಪ್ರಕಾರ (ನಮೂನೆ ಲಗತ್ತಿಸಿದೆ) ಉಳಿದ ಎಲ್ಲ ಇತರ ಧಾರಕರು ಯಾರ ಹೆಸರಿಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾರೋ ಆ ಜಂಟಿಧಾರಕರಲ್ಲಿ ಒಬ್ಬರ ಹೆಸರಿಗೆ ಅವಧಿ ತುಂಬಿದ ಹುಟ್ಟುವಳಿಯನ್ನು ಸಹ ಬಿಡುಗಡೆ ಮಾಡುವುದಕ್ಕೆ ಅವಕಾಶ ನೀಡಲು ಈಗ ನಿರ್ಧರಿಸಲಾಗಿದೆ. ಬಡ್ಡಿ ವಾರಂಟುಗಳನ್ನು ಜಂಟಿಧಾರಕರ ಅಧಿಕಾರ ಪತ್ರವನ್ನು ಪಡೆದುಕೊಳ್ಳುವುದಕ್ಕೆ

ಒಳಪಟ್ಟು ಮೊದಲ ಧಾರಕನ ಹೆಸರಿನಲ್ಲಿ ನೀಡಲು ಈಗಾಗಲೇ ಅವಕಾಶ ನೀಡಲಾಗಿದೆ (ಸಿಎಫ್. ಸಂಖ್ಯೆ ಸಿಒ. ಡಿಟಿ 13.01.201/1488 /2000–01 ದಿನಾಂಕ ಸೆಪ್ಟೆಂಬರ್ 20,2000).

3. ಆದ್ದರಿಂದ ಅವಧಿ ತುಂಬಿದ ಹುಟ್ಟುವಳಿಯನ್ನು ಪ್ರತಿನಿಧಿಸುವ ಸಂದಾಯ ಆದೇಶಗಳನ್ನು ಯಾರ ಹೆಸರಿನಲ್ಲಿ ಅಧಿಕಾರ ಪತ್ರವನ್ನು ಬರೆದುಕೊಡಲಾಗಿದೆಯೊ ಆ ಜಂಟಿಧಾರಕರ ಹೆಸರಿನಲ್ಲಿ ನೀಡುವಂತೆ ಕೋರಿದರೆ ನೀವು ಹಾಗೆ ಮಾಡಬಹುದು.

4. ಯೋಜನೆಯನ್ನು ನಿರ್ವಹಿಸುವ ಗೊತ್ತುಪಡಿಸಿದ ಶಾಖೆಗಳಿಗೆ ದಯವಿಟ್ಟು ಅಗತ್ಯ ಸೂಚನೆಗಳನ್ನು ನೀಡಿ.

5. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

**ಸಹಿ**
**(ಡಿ. ರಾಜಗೋಪಾಲರಾವ್)**
**ಉಪ ಪ್ರಧಾನ ವ್ಯವಸ್ಥಾಪಕರು**